ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮುದ್ದಮಾದಶೆಟ್ಟಿ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಲೇ. ಬಸವಶೆಟ್ಟಿ | **27.12.2023** |
| ವಯಸ್ಸು | : | 63 ವರ್ಷ | |
| ವೃತ್ತಿ | : | ವ್ಯವಸಾಯ | ಪಿ.ಡಬ್ಲ್ಯೂ: 4 |
| ವಾಸಸ್ಥಳ | : | ತಗಡೂರು | ಸಿ.ಡಬ್ಲ್ಯೂ: 4 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ಫ್ರಾಸಾ 1 , 2 ರವರ ಪರಿಚಯವಿದೆ. ಚಾಸಾ– 5 ರವರ ಪರಿಚಯ ಇತ್ತು ಅವರು ಮರಣ ಹೊಂದಿದ್ದಾರೆ. ದಿಃ16.06.2020 ರಂದು ಫ್ರಾಸಾ 1 ರವರು ಸಾಗುವಳಿ ಮಾಡುವ ಜಮೀನಿನ ಹತ್ತಿರ ಪೊಲೀಸರು ಬಂದಿದ್ದರು. ಆರೋಪಿ ಫ್ರಾಸಾ 1 ರವರಿಗೆ ಹಲ್ಲೆ ಮಾಡಿದ್ದಾನೆ ಎನ್ನುವ ಕಾರಣಕ್ಕಾಗಿ ಸ್ಥಳ ಪಂಚನಾಮೆಗೆ ಪೊಲೀಸರು ಅಲ್ಲಿಗೆ 11.30 ಅಥವಾ 12 ಗಂಟೆ ಸಮಯದಲ್ಲಿ ಬಂದಿದ್ದರು. ಆ ಸಮಯದಲ್ಲಿ ನಾನು ಹಾಗೂ ಚಾಸಾ– 5 ಸ್ಥಳದಲ್ಲಿ ಇದ್ದೆವು. ಫ್ರಾಸಾ 2 ಸ್ಥಳದಲ್ಲಿ ಇದ್ದರು. ಪೊಲೀಸರಿಗೆ ಸ್ಥಳವನ್ನು ಆರೋಪಿ ಮಂಜುನಾಥ ತೋರಿಸಿದ. ಪೊಲೀಸರು ಅವನನ್ನು ಕರೆದುಕೊಂಡು ಬಂದಿದ್ದರು. ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿದ್ದಂತಹ ರಕ್ತ ಹತ್ತಿದ ಮಣ್ಣು ಹಾಗೂ ಸಾದಾ ಮಣ್ಣನ್ನು ಡಬ್ಬಕ್ಕೆ ಹಾಕಿ ವಶಕ್ಕೆ ಪಡೆದರು. ಆ ದಿನ ವಶಕ್ಕೆ ಪಡೆದುಕೊಂಡಂತಹ ಮಣ್ಣನ್ನು ನೋಡಿದರೆ ಗುರುತಿಸುತ್ತೇನೆ. ಮು. ಮಾ. **3** ಮತ್ತು **4** ಆ ದಿನ ವಶಕ್ಕೆ ಪಡೆದುಕೊಂಡಂತಹ ಮಣ್ಣುಗಳಾಗಿವೆ. ಮು. ಮಾ. **3** ಮತ್ತು **4** ರ ಮೇಲೆ ಹಚ್ಚಿದ್ದ ಚೀಟಿಗಳ ಮೇಲೆ ನನ್ನ ಸಹಿ ಇದೆ. ನಿಪಿ. **4** ಸ್ಥಳದಲ್ಲಿ ಬರೆದ ಪಂಚನಾಮೆಯಾಗಿದ್ದು

ಅದಕ್ಕೆ ನಾನು ಸಹಿ ಮಾಡಿದ್ದೇನೆ ಸಾಕ್ಷಿಯ ಸಹಿಯನ್ನು ನಿಪಿ 4 (ಎ) ಎಂದು ಗುರುತಿಸಲಾಯಿತು. ಮೇಲಿನ ವಿಷಯಗಳ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎಮ್ ಎನ್ ರವರಿಂದಃ</u>**

2. ಆರೋಪಿ ನಮ್ಮ ಗ್ರಾಮದ ಮಹಿಳೆಯನ್ನು ಮದುವೆಯಾಗಿದ್ದೇನೆ ಎಂದರೆ ಗೊತ್ತಿಲ್ಲ. ಆ ದಿನ ಆರೋಪಿಯನ್ನು ಪೊಲೀಸರು ಕರೆದುಕೊಂಡು ಬಂದಿದ್ದರಿಂದ ನನಗೆ ಪರಿಚಯವಾಯಿತು. ಸ್ಥಳದಿಂದ ಮಣ್ಣನ್ನು ತೆಗೆದುಕೊಳ್ಳುವಾಗ ಪೊಲೀಸರು ಸ್ಥಳದಲ್ಲಿಯೇ ಇದ್ದರು ಮಣ್ಣನ್ನು ಫ್ರಾಸಾ 2 ರವರು ತೆಗೆದುಕೊಟ್ಟ. ಮಣ್ಣು ತೆಗೆದುಕೊಳ್ಳುವ ಸ್ಥಳದಲ್ಲಿ ತೇವಾಂಶ ಇರಲಿಲ್ಲ. ನಾವು ಸ್ಥಳಕ್ಕೆ ಹೋದ ಸಮಯದಲ್ಲಿ ಸ್ಥಳದಲ್ಲಿ ಹೆಜ್ಜೆ ಗುರುತು ಹಾಗೂ ವ್ಯಕ್ತಿ ಬಿದ್ದು ಒದ್ದಾಡಿದ ಗುರುತು ಇದ್ದವು. ನಿಪಿ. 4 ರಲ್ಲಿ ಬರೆದ ವಿಷಯವನ್ನು ಓದಿ ಹೇಳಿದರು. ಹೆಜ್ಜೆ ಗುರುತು ಇದ್ದ ವಿಷಯವನ್ನು ನಿಪಿ. 4 ರಲ್ಲಿ ಗುರುತಿಸಿದ್ದಾರೆ. ನಿಪಿ. 4 ರಲ್ಲಿ ಆರೋಪಿ ಎಂದು ಮಾತ್ರ ಬರೆದಿದ್ದು ಹೆಸರು ಬರೆದಿಲ್ಲ ಎಂದರೆ ನಿಜ . ಆ ದಿನ ಹಾಗೂ ಮರುದಿನ ನಾನು ಠಾಣೆಗೆ ಹೋಗಿದ್ದೆ. ಪಂಚನಾಮೆ ಮಾಡಿದ ನಂತರ ಠಾಣೆಗೆ ಹೋಗಿದ್ದೆ. ಪಂಚನಾಮೆಯ ದಿನವೇ ಸ್ಥಳದಲ್ಲಿಯೇ ನನ್ನ ಹೇಳಿಕೆ ಮಾಡಿಕೊಂಡಿದ್ದಾರೆ. ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನನ್ನ ಹೇಳಿಕೆಯನ್ನು ಸ್ಥಳದಲ್ಲಿಯೇ ಕೈಯಿಂದ ಬರೆದುಕೊಂಡಿದ್ದಾರೆ , ಬೆರಳಚ್ಚು ಮಾಡಿಲ್ಲ.

3. ಫ್ರಾಸಾ 2 ರವರು ನಮ್ಮ ಗ್ರಾಮದವರೇ ಆದ್ದರಿಂದ ಅವರಿಗೆ ಸಹಾಯಮಾಡಲು ನಾನು ಸ್ಥಳಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಗ್ರಾಮ ಹಿರಿಯನಾಗಿ ನಾನು ಸ್ಥಳಕ್ಕೆ ಹೋಗಿದ್ದೆ. ಫ್ರಾಸಾ 2 ಘಟನೆಯ ಬಗ್ಗೆ ಆ ದಿನ ನನಗೆ ಹೇಳಿದ್ದರು . ಆ ದಿನ ಪೊಲೀಸರು

ಆರೋಪಿಯನ್ನು ಸ್ಥಳಕ್ಕೆ ಕರೆದುಕೊಂಡು ಬಂದಿರಲಿಲ್ಲವಾದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫ್ರಾಸಾ 1 ಮತ್ತು 2 ನಾವು ಒಂದೇ ಗ್ರಾಮಸ್ಥರಾದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

27.12.2023
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.